

**ಇಂದಿಗೂ ಪಾಶ್ಚಿಮಾತ್ಯ ರಾಷ್ಟದವರಿಗೆ ಚೀನಾದ ‘ಹನಿ ಟ್ರ್ಯಾಪ್’ ಬೇಹುಗಾರಿಕೆ ಕುರಿತು ಭಯವಿದೆಯಂತೆ. ಕೆಲವು ವರ್ಷಗಳ ಹಿಂದೆ ‘ಎಂ15’ ಸಂಸ್ಥೆಯು 14 ಪುಟಗಳ ಎಚ್ಚರಿಕೆ ಪತ್ರವೊಂದನ್ನು ಬ್ರಿಟಿಷ್ ಬ್ಯಾಂಕುಗಳು, ವ್ಯಾವಹಾರಿಕ ಕೇಂದ್ರಗಳಿಗೆ ಕಳುಹಿಸಿತ್ತು.**





‘ಹನಿ ಟ್ರ್ಯಾಪ್’ಗೆ ತುತ್ತಾಗುತ್ತಿದ್ದರು. ಇತ್ತೀಚೆಗೆ ಕೊರಳಲ್ಲಿರುವ ಚೈನ್, ಪರ್ಸಿನಲ್ಲಿರುವ ಹಣ, ಹತ್ತಿಪ್ಪತ್ತು ಸಾವಿರ ರೂಪಾಯಿಗೂ ‘ಹನಿ ಟ್ರ್ಯಾಪ್’ ಪ್ರಕರಣಗಳು ನಡೆಯುತ್ತಿರುವ ಉದಾಹರಣೆಗಳಿವೆ. ಹಲವರು ಮರ್ಯಾದೆ ಎಂದು ಅಳುಕದೆ ಪೊಲೀಸ್ ಠಾಣೆ ಮೆಟ್ಟಿಲೇರುತ್ತಿರುವುದರಿಂದ ಪ್ರಕರಣಗಳೂ ಬಯಲಿಗೆ ಬರುತ್ತಿವೆ.

### ಪಿಲ್ಲೋ ಟಾಕ್!

ಬೇಹುಗಾರಿಕೆಗೂ ಲೈಂಗಿಕತೆಗೂ ಬಿಡದ ನಂಟು. ಹಾಸಿಗೆಯ ದಿಂಬಿನ ಮೇಲೆ ತಲೆ ಇಟ್ಟು ಸರಸ ಸಲ್ಲಾಪದಲ್ಲಿ ತೊಡಗಿರುವ ವೇಳೆಯೇ ರಹಸ್ಯ, ಸ್ಫೋಟಕ ಮಾಹಿತಿಗಳನ್ನು ಕದಿಯಲಾಗುತ್ತದೆ. ಇಲ್ಲವೇ ಖಾಸಗಿ ದೃಶ್ಯಗಳನ್ನು ರಹಸ್ಯವಾಗಿ ಸೆರೆ ಹಿಡಿದು, ನಂತರ ತಮ್ಮ ಕಾರ್ಯೋದ್ದೇಶಕ್ಕೆ ತಕ್ಕಂತೆ ಅವುಗಳನ್ನು ಬಳಸಿಕೊಳ್ಳಲಾಗುತ್ತದೆ.

ಇಲ್ಲಿ ಖೆಡ್ಡಾಕ್ಕೆ ಬೀಳಿಸುವ ಯುವತಿಯರ ಸೌಂದರ್ಯದ ಜತೆಗೆ ಬುದ್ಧಿ, ಚಾತುರ್ಯ, ಆತ್ಮವಿಶ್ವಾಸ ಮತ್ತು ಧೈರ್ಯವೂ ಸಾಕಷ್ಟು ಕೆಲಸ ಮಾಡಲಿದೆ. ಎದುರಿನ ವ್ಯಕ್ತಿಗೆ ಕೊಂಚವೂ ಶಂಕೆ ಬಾರದಂತೆ ಪ್ರೀತಿ ಹಾಗೂ ಪ್ರೇಮದ ನಾಟಕವಾಡುತ್ತ, ಹಾಸಿಗೆಯನ್ನು ಹಂಚಿಕೊಳ್ಳುತ್ತಲೇ ಕಾರ್ಯೋದ್ದೇಶವನ್ನೂ ಮರೆಯದಂತೆ ಅವರು ಪಳಗಿರುತ್ತಾರೆ. ಗೆದ್ದರೆ ಸಾಕಷ್ಟು ಹಣ, ಮರೆತರೆ ಜೈಲು ಇಲ್ಲವೇ ಪ್ರಾಣಾಪಾಯದ ಕಂಟಕವೂ ಇಲ್ಲವೆಂದೇನೂ ಇಲ್ಲ.

‘ಹನಿ ಟ್ರ್ಯಾಪ್’ ಎನ್ನುವುದು ಒಂದು ದಿನದ ಕಥೆಯಲ್ಲ. ಗಾಳಕ್ಕೆ ಬೀಳಿಸಲು ಗುರ್ತಿಸಲಾದ ವ್ಯಕ್ತಿಯ ವಿಶ್ವಾಸ ಸಂಪಾದಿಸಲು ತಿಂಗಳು, ವರ್ಷಗಳೇ ಬೇಕಾಗಬಹುದು. ವ್ಯಕ್ತಿಯ ಆಸಕ್ತಿ, ದೌರ್ಬಲ್ಯಗಳನ್ನು ತಿಳಿದು ಸ್ನೇಹ ಸಂಪಾದಿಸಬೇಕು. ಬೆಣ್ಣೆಯಲ್ಲಿ ಕೂದಲು ತೆಗೆದಂತೆ ಗೂಢಚಾರಣಿಯರು ಮೋಸಕ್ಕೊಳಗಾದ ವ್ಯಕ್ತಿಗೆ ಅಸಲಿಯತ್ತು ತಿಳಿಯದಂತೆ ಅಗತ್ಯ ಮಾಹಿತಿಯನ್ನು ಪಡೆದು ಮರೆಯಾಗುತ್ತಾರೆ. ಆದರೆ ಕೆಲವೊಂದು ವಿಚಿತ್ರ ಪ್ರಸಂಗಗಳಲ್ಲಿ, ಖೆಡ್ಡಾಕ್ಕೆ ಬೀಳಿಸಲು ಹೋದವರೇ ಮೋಹಪಾಶಕ್ಕೆ ಸಿಲುಕಿದ ಉದಾಹರಣೆಗಳೂ ಇವೆ. ಇಂಥ ಒಂದಷ್ಟು ಕಥೆಗಳು ಸಿನಿಮಾಗಳೂ ಆಗಿವೆ.

‘ರಿವರ್ಸ್ ಹನಿ ಟ್ರ್ಯಾಪಿಂಗ್’ ಕೂಡ ನಡೆದ ಪ್ರಸಂಗಗಳಿವೆ. ಬೀಜಿಂಗ್‌ನಲ್ಲಿದ್ದ ‘ರಾ’ ಅಧಿಕಾರಿ ಮನಮೋಹನ ಶರ್ಮಾ 2008ರಲ್ಲಿ ಚೀನಿ ಭಾಷೆಯ ಶಿಕ್ಷಕಿಯ ಪ್ರೇಮದ ಬಲೆಗೆ ಬಿದ್ದರು. ಆಕೆ ಸರ್ಕಾರದ ಮಾಹಿತಿದಾರಳಾಗಿದ್ದಳು ಎಂಬ ಸಂಗತಿ ಆ ಅಧಿಕಾರಿಗೆ ತಿಳಿದಿರಲಿಲ್ಲ. ಹಾಗೆಯೇ ಹಾಂಕಾಂಗ್‌ನಲ್ಲಿದ್ದ ‘ರಾ’ ಅಧಿಕಾರಿ ರವಿ ನಾಯರ್ ಅವರೂ ಬೇಹುಗಾರಿಕಾ ಯುವತಿಯೊಂದಿಗೆ ಗಾಢ ಸಂಬಂಧ ಹೊಂದಿದ್ದರು.

‘ಹನಿ ಟ್ರ್ಯಾಪ್’ನಲ್ಲಿ ಬಲೆ ಹಾಕಲು ಯುವತಿಯರನ್ನೇ ಬಳಸಲಾಗುತ್ತದೆ ಅಥವಾ ಮಹಿಳೆಯರೇ ಬಲೆ ಹಾಕುತ್ತಾರೆ ಎಂದೇನೂ ಅಲ್ಲ. ಅವರವರ ಲೈಂಗಿಕ ವಾಂಛೆಗೆ ತಕ್ಕಂತೆ